ಶ್ರೀ ಎಸ್. ಬಂಗಾರಪ್ಪ.—ತಮ್ಮ ಉತ್ತರದಲ್ಲಿ 112, 236 ಮತ್ತು 168—ಹೀಗೆ ಕನ್ನಡ ಮಾಧ್ಯಮವಿಲ್ಲದ ಸ್ಕೂಲುಗಳ ಸಂಖ್ಯೆಯನ್ನು ಕೊಟ್ಟಿದ್ದೀರಿ. ಇವುಗಳು ಒಟ್ಟು 516 ಸ್ಕೂಲುಗಳಾಗುತ್ತವೆ. ಇವತ್ತು ಸರ್ಕಾರದವರು ಈ ಸಭೆಯಲ್ಲಿ ಮತ್ತು ಪ್ರತಿಯೊಂದು ಹಂತದಲ್ಲಿಯೂ ಕನ್ನಡವನ್ನು ಜಾರಿಗೆ ತರಬೇಕೆಂದು ಹೇಳುತ್ತಿರುವಾಗ, ಹೀಗೆ ಮಾಡುತ್ತಿರುವುದ ಅದಕ್ಕೆ ವಿರುದ್ಧವಾದ ನೀತಿಯಲ್ಲವೇ ; ಮತ್ತು ಈ ಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ತರುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತೀರಿ ಮತ್ತು ಒತ್ತಾಯವಾಗಿ ಜಾರಿಗೆ ಅದನ್ನು ತರುತ್ತೀರಾ ?

ಶ್ರೀ ಎ.ಆರ್. ಬದರೀನಾರಾಯಣ.—ಸಭೆಯಲ್ಲಿ ಕನ್ನಡವನ್ನು ಜಾರಿಗೆ ತರುವುದು ನನಗೆ ಸೇರಿದ್ದಲ್ಲ. ಅದರ ಬಗ್ಗೆ ಮುಖ್ಯಮಂತ್ರಿಯವರಿಗೆ ಕೇಳಬೇಕಾಗುತ್ತದೆಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಅದದ್ದು ಆಯಿತು. ಇನ್ನು ಮುಂದಾದರೂ ಈ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಒಂದು ನಿಯಮವನ್ನು ಹಾಕುತ್ತೀರಾ : ಮತ್ತು ಮುಂದೆ ಆರಂಭವಾಗತಕ್ಕಂತಹ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂದು ಒಂದು ನೀತಿಯನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅದರ ಬಗ್ಗೆ ಮಾನ್ಯ ತಿಮ್ಮಪ್ಪನವರು ಪ್ರಶ್ನೆ ಕೇಳಿದಾಗ ಉತ್ತರ ಹೇಳಿದ್ದೇನೆ.

Vacant Posts in Technical Education Department

847. Sri J. L. KABADE (Ballolli).—

Will the Minister for Education be pleased to state :—

(*a*) whether there are any vacancies of posts of Head of Section *cum*-Principal (Gazetted Class II) or its equivalent posts in the Department of Technical Education, if so, since when the posts are lying vacant ;

(*b*) the reason for not filling up vacant posts by promotions as per recruitment and cadre rules ;

(*c*) whether it is a fact that some lent officials from PWD have been posted against some vacant posts ; if so, the number of such officials ;

(*d*) the steps taken to repatriate PWD Officials and to fill up the posts by promoting the Officials of the Department of Technical Education ?

Sri A. R. BADARINARAYANA (Minister for Education).—

(*a*) There are no posts of Head of Section-*cum*-Principal. But there are vacancies of Heads of Sections. The vacancies arose prior to 1971.

(*b*) As per the C and R Rules of the Department of Technical Education, the vacancies have o be filled up by direct recruitment through M.P.S.C. Hence the posts have not been filled up by promotion.

(*c*) Yes, 6 (six) Officers.

(SRI A. R. BADARINARAYANA)

(*d*) The question of filling up the direct recruitment vacancies of Heads of Sections through P.S.C. is under consideration of Government. Immediately after the posts are filled up, the lent officials from P W.D will be repatriated.

As these vacancies have to be filled in by direct recruitment they cannot be filled in by promotion.

ಶ್ರೀ ಜೆ. ಎಲ್. ಕಬಾಡಿ.—ತಮ್ಮ ಉತ್ತರದಲ್ಲಿ ಹೆಡ್ಸ್ ಆಫ್ ಸೆಕ್ಷನ್ಸ್ ಉದ್ಯೋಗಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಅಂದರೆ 1971 ಕ್ಕಿಂತ ಮೊದಲು ಎಷ್ಟು ಉದ್ಯೋಗಗಳು ಇದ್ದವು ?

† ಶ್ರೀ ಎ. ಆರ್. ಬದರೀನಾರಾಯಣ. —15.

ಶ್ರೀ ಜೆ. ಎಲ್. ಕಬಾಡಿ.—15 ಜಾಗಗಳಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಷ್ಟು ಮತ್ತು ಪ್ರೊಮೋಷನಿನಲ್ಲಿ ಎಷ್ಟು ಕೊಡುತ್ತೀರಿ ಎಂಬುದರ ಪರಸೆಂಟೇಜನ್ನು ಹೇಳುತ್ತೀರಾ ? ನೀವು ಕೇಡರ್ ಅಂಡ್ ರೂಲ್ಸ್ ಪ್ರಕಾರ ಎಷ್ಟು ಇಟ್ಟುಕೊಂಡಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಹಿಂದಿನ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಯಾವ್ಯಾವ ಪೋಸ್ಟುಗಳಿಗೆ ಎಷ್ಟೆಷ್ಟು ನಿಗದಿ ಮಾಡಬೇಕೆಂಬುದು ಇರಲಿಲ್ಲವಾದ್ದರಿಂದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಅಮೆಂಡ್ ಮಾಡಿದೆ. 19—4—72ರಲ್ಲಿ ರೂಲ್ಸ್ ಅಮೆಂಡ್ ಮಾಡಿದೆ. ಅದರ ಪ್ರಕಾರ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಡೈರೆಕ್ಟರಿಂದ ಪ್ರೊಪೋಸಲ್ಸ್ ಬಂದಿವೆ. ಅದರ ಪ್ರಕಾರ ಅದನ್ನು ನಾವು ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—1971ರಿಂದ ಖಾಲಿ ಇರತಕ್ಕಂತಹ ಜಾಗಗಳಿಗೆ ಇನ್ನೂ ಪರಿಶೀಲನೆ ಮಾಡಿ ಪಿ. ಎಸ್. ಸಿ. ಯವರಿಗೆ ಕಳಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಪಿ.ಎಸ್.ಸಿ. ಯವರು ಇಲ್ಲಿಯವರೆಗೂ ಕಾಲ್ ಫಾರ್ ಮಾಡಿಲ್ಲ. ಇದಕ್ಕೆ ಬೇರೆ ಇರಾಕೆಯಿಂದ ಈ ಇಲಾಖೆಗೆ ತೆಗೆದುಕೊಂಡು ಕೆಲವರಿಗೆ ಫೇವರಿಟಿಸಂ ತೋರಿಸಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಅಲ್ಲಿದ್ದಂತಹ ಕೇಡರ್ ರಿಕ್ರೂಟ್‌ಮೆಂಟ್ಸ್ ರೂಲ್ಸ್‌ಗಳಲ್ಲಿ ನ್ಯೂನತೆ ಇದ್ದುದರಿಂದ ಈ ನ್ಯೂನತೆಗಳನ್ನು ಸರಿಪಡಿಸಿ, ವೇಕೆನ್ಸಿ ಎಷ್ಟು ಇದೆಯೆಂಬುದನ್ನು ತಿಳಿಸಿಕೊಂಡು, ಅವನ್ನು ಈಗ ಪಿ.ಎಸ್.ಸಿ.ಗೆ ಕಳಿಸಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಡಿಪಾರ್ಟ್‌ಮೆಂಟಿನಲ್ಲಿರತಕ್ಕಂತಹ ಷೆಡ್ಯೂಲ್ ಕ್ಯಾಸ್ಟ್ ಜನರು ಸೀನಿಯರ್ ಆಗಿರುವುದರಿಂದ ಅವರಿಗೆ ಬೇಗನೇ ಪ್ರೊಮೋಷನ್ ಸಿಗುತ್ತದೆ ಎಂದು ಈ ರೀತಿ ಮಾಡಿದ್ದಾರೆಂಬುದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಶೆಡ್ಯೂಲ್ ಕ್ಯಾಸ್ಟಿನವರು ಅಲ್ಲಿ ಇದ್ದು ಅವರಿಗೆ ಸಿಗುತ್ತದೆ ಎಂದಾದರೆ ಅದನ್ನು ಅಗತ್ಯವಾಗಿ ನೋಡುತ್ತೇನೆ.

Entertainment Clubs in Gulbarga City

752. **Sri PRABHAKAR TELKAR** (Kalagi).—

Will the Chief Minister be pleased to state :—

(*a*) whether it has come to the notice of the Government that numerous entertainment clubs have sprung up during the recent past in Gulbarga City ; if so, the number of such clubs ;